# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 269/2021**

| | | |
|---|---|---|
| ಸಾಕ್ಷಿದಾರರ ಹೆಸರು | : ಮಹೇಶ್ ಮಡಿವಾಳ | ಪಿಡಬ್ಲ್ಯೂ : 1 |
| ತಂದೆಯ / ಗಂಡನ ಹೆಸರು | : ಪರಸಪ್ಪ | ಸಿಡಬ್ಲ್ಯೂ : 1 |
| ವಯಸ್ಸು | : 33 ವರ್ಷ | |
| ಉದ್ಯೋಗ | : ಎಪಿಸಿ–206 | |
| ವಾಸಸ್ಥಳ | : ಜ್ಯೋತಿನಗರ, ಮೈಸೂರು | |

**ಸಾಕ್ಷಿಯನ್ನು ಈ ದಿನ ದಿ:06.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಈಗ ಪ್ರಸ್ತುತ ಡಿ ಆರ್ ಕೇಂದ್ರ ಸ್ಥಾನದಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿ.25.09.2019 ರಿಂದ 20.10.2023 ರವರಗೆ ನಾನು ಬಿಳಿಗೆರೆ ಪೊಲೀಸ್ ಠಾಣೆಯಲ್ಲಿ ಸಬ್ ಇನ್ಸ್‌ಪೆಕ್ಟರ್ ರವರ ವಾಹನದ ಚಾಲಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

3. ಚಾಸಾ.9 ರವರು ನಮ್ಮ ವಿಭಾಗದ ಡಿ ವೈ ಎಸ್ ಪಿ ಆಗಿದ್ದರು. ಚಾಸಾ.10 ಮತ್ತು 11 ರವರು ಸಹ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.

4. ದಿ.13.10.2019 ರಂದು ವಾಲ್ಮೀಕಿ ಜಯಂತಿ ಇದ್ದು, ಅದರ ಪ್ರಯುಕ್ತ ನಂಜನಗೂಡು ಟೌನ್ ನಲ್ಲಿ ಬಂದೋಬಸ್ತ್ ನೇಮಿಸಿದ್ದು, ನಾನು ಪಿ ಎಸ್ ಐ ರವರ

ವಾಹನ ಚಾಲಕನಾಗಿ ಬೆಳಿಗ್ಗೆ 08.00 ಗಂಟೆಗೆ ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ಸದರಿ ಜಯಂತಿ ಪ್ರಯುಕ್ತವಾಗಿ ನಂಜನಗೂಡು ತಾಲ್ಲೂಕು ಆಡಳಿತ ವತಿಯಿಂದ ಮೆರವಣಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಸದರಿ ಮೆರವಣಿಗೆ ಸರ್ಕಾರಿ ಬಾಲಕ ಪದವಿ ಪೂರ್ವ ಕಾಲೇಜು ಮೈದಾನಿಂದ ಪ್ರಾರಂಭವಾಗಿ ಶ್ರೀಕಂಠೇಶ್ವರ ದೇವಸ್ಥಾನದ ಕಲಾ ಮಂದಿರದವರೆಗೆ ಸಾಗಬೇಕಾಗಿತ್ತು. ಸದರಿ ಕಾರ್ಯುಕ್ರಮವು ಬೆಳಗ್ಗೆ 11.00 ಗಂಟೆಗೆ ಪ್ರಾರಂಭವಾಗಿ 01.00 ಗಂಟೆಗೆ ಮುಕ್ತಾಯವಾಗಬೇಕಾಗಿತ್ತು. ಮೆರವಣಿಗೆಯು 11.00 ಗಂಟೆಗೆ ಪ್ರಾರಂಭವಾಗಿತ್ತು. ಮೆರವಣಿಗೆಯಲ್ಲಿ 5-6 ಸಾವಿರ ಜನ ಸೇರಿದ್ದರು.

5. ನಂತರ ನಂಜನಗೂಡು ಊಟಿ ರಸ್ತೆಯಲ್ಲಿ ಇರುವ ಚಿಂತಾಮಣಿ ಸರ್ಕಲ್ ಬಳಿ ಮಧ್ಯಾಹ್ನ 01.00 ಗಂಟೆಗೆ ಮೆರವಣಿಗೆ ಬಂದಿರುತ್ತದೆ. ಮೆರವಣಿಗೆಯಲ್ಲಿ ಡಿಜೆ ಹಾಕಿರುತ್ತಾರೆ. ಆಗ ನಮ್ಮ ಮೇಲಾಧಿಕಾರಿಯವರು ಅದನ್ನು ಹಾಕುವುದು ಬೇಡ ಎಂದು ಹೇಳಿದಾಗ ಕೆಎ 55 ಜಿ 403 ವಾಹನದಲ್ಲಿ ಅಳವಡಿಸಿದ ಸಿಸ್ಟಂ ನಿಂದ ಸಬ್ ಇನ್ಸ್ ಪೆಕ್ಟರ್ ರವರು ಡಿ ಜೆ ಹಾಕಬೇಡಿ, ಗುಂಪು ಸೇರಬೇಡಿ, ಮೆರವಣಿಗೆಯನ್ನು ನಿಧಾನವಾಗಿ, ಸಮಾಧಾನದಿಂದ ನಡೆಸಿ ಎಂದು ಹೇಳಿ, ಅಲ್ಲಿ ಸೇರಿದ ಜನರಿಗೆ ಸೂಚಿಸಿರುತ್ತಾರೆ. ಅಲ್ಲಿ ಸೇರಿದ ಜನರು ಸೂಚನೆಯನ್ನು ಪಾಲಿಸಿರುವುದಿಲ್ಲ. ಅಲ್ಲಿ ಸೇರಿದ್ದ ಜನ ಡಿಜೆ ಹಾಕಬೇಕು ಎಂದು ಒತ್ತಾಯಿಸಿದ್ದರು. ಆ ಸಮಯದಲ್ಲಿ ಗಲಭೆ ಉಂಟಾಯಿತು. ಅಲ್ಲಿ ಅಕ್ರಮ ಕೂಟ ಕಟ್ಟಿ ಕಲ್ಲು ತೂರಾಟ ಮಾಡಲು ಪ್ರಾರಂಭಿಸಿದರು. ಸೂರಳ್ಳಿ ಮಣಿಕಂಠ ಮತ್ತು ಕೃಷ್ಣನಾಯಕ ರವರು ಮತ್ತು ಇತರರು ನಮ್ಮ ಅಧಿಕಾರಿಗಳ ನಮ್ಮ ಮೇಲೆ ಕಲ್ಲು ತೂರಾಟ ಮಾಡಲು ಪ್ರಾರಂಭಿಸಿರುತ್ತಾರೆ. ಸಾರ್ವಜನಿಕವಾಗಿ ಸಂಚಾರಕ್ಕೆ ಅಡೆ ತಡೆ ಕೂಡ ಮಾಡಿರುತ್ತಾರೆ. ಸದರಿ ವ್ಯಕ್ತಿಗಳು ಪಿಕ್ ಅಪ್ ವಾಹನದಲ್ಲಿ ಬಂದಿದ್ದರು. ಅವರು ಬಂದಿದ್ದ

ವಾಹನ ಕೆಎ 09 250 ಮತ್ತು ಕೆಎ 09 ಸಿ 5082 ಆಗಿರುತ್ತದೆ. ಸದರಿ ವಾಹನದಲ್ಲಿ ಆಸಾಮಿಗಳು ಡಿಜೆ ಹಾಕಿಕೊಂಡಿದ್ದರು ಮತ್ತು ಅದರಲ್ಲಿ ಆಗಲೇ ಕಲ್ಲುಗಳು ಇದ್ದವು. ಅವರು ಡಿಜೆ ಹಾಕಲೇಬೇಕು, ಇಲ್ಲವಾದರೆ ಮೆರವಣಿಗೆ ಮುಂದುವರೆಸಲು ಬಿಡುವುದಿಲ್ಲ ಎಂದು ಹೇಳಿದರು.

6. ಊಟಿ–ಮೈಸೂರು ರೋಡ್ ಗೆ ಹೋಗುವ ಸಾರ್ವಜನಿಕರ ವಾಹನಗಳಿಗೆ ಸಂಚಾರಿ ಅಡೆ ತಡೆ ಮಾಡಿರುತ್ತಾರೆ. ಕಲ್ಲು ತೂರಾಟ ದಲ್ಲಿ ನನ್ನ ಬಲಗೈ ಗೆ ಕಲ್ಲು ಬಿದ್ದು, ಏಟಾಗಿರುತ್ತದೆ. ಡಿ ವೈ ಎಸ್ ಪಿ ರವರಿಗೆ ಕಲ್ಲುಗಳಿಂದ ಏಟಾಗಿದ್ದು, ಸಾರ್ವಜನಿಕ ಬಸ್ ಗಳಿಗೂ ಸಹ ಜಖಂ ಆಗಿರುತ್ತದೆ .

7. ನಂತರ ಹೆಚ್ಚಿನ ಪೊಲೀಸರನ್ನು ಕರೆಸಿ ಲಾಠಿ ಚಾರ್ಜ್ ಮಾಡಿ, ಅಲ್ಲಿದ್ದವರನ್ನು ಚದುರಿಸಿ, ನಂತರ ಡಿಜೆ ಹಾಕಿಕೊಂಡಿದ್ದ ವಾಹನಗಳನ್ನು ಮತ್ತು ಗಲಾಟೆ ಮಾಡುತ್ತಿದ್ದ ಆಸಾಮಿಗಳನ್ನು ವಶಕ್ಕೆ ಪಡೆದುಕೊಂಡು ನಂತರ ಮೆರವಣಿಗೆಯನ್ನು ಶಾಂತಿಯುತವಾಗಿ ಮುಂದುವರೆಸಲಾಯಿತು.

8. ನನಗೆ ಏಟಾದ್ದರಿಂದ ನಾನು ನಂಜನಗೂಡ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಅಲ್ಲಿಂದ ಬಂದು ನಂಜನಗೂಡು ಪಟ್ಟಣ ಪೊಲೀಸ್ ಠಾಣೆಗೆ ಗಲಾಟೆ ಸಂಬಂಧಪಟ್ಟಂತೆ ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯೂ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ದೂರಾಗಿದ್ದು ಅದನ್ನು ನಿಪಿ.1 ಎಂದು , ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

9. ಆಸಾಮಿಗಳು ಗಲಭೆ ಮಾಡಿದ್ದರಿಂದ ನಮ್ಮ ಮತ್ತು ನಮ್ಮ ಅಧಿಕಾರಿಗಳ ಕರ್ತವ್ಯಕ್ಕೆ ಅಡೆ ತಡೆಯಾಗಿದ್ದು, ಸಾರ್ವಜನಿಕರಿಗೂ ಸಹ ತೊಂದರೆಯಾಗಿರುತ್ತದೆ.

10. ನಂತರ ಚಾಸಾ.31 ರವರು ಪಂಚರ ಜೊತೆಗೆ ಚಿಂತಾಮಣಿ ಸರ್ಕಲ್ ಬಳಿ ಬಂದಿದ್ದು, ಅಲ್ಲಿ ನಾನು ಕೂಡ ಹಾಜರಿದ್ದೆನು. ಚಾಸಾ.31 ರವರಿಗೆ ಗಲಾಟೆಯಾದ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಅಲ್ಲಿ ಪಂಚರಾದ ಚಾಸಾ.2 ಮತ್ತು 3 ರವರ ಸಮಕ್ಷಮ ಸ್ಥಳ ಮಹಜರ್ ಮಾಡಿರುತ್ತಾರೆ. ನನಗೆ ಹಲ್ಲೆ ಮಾಡಲು ಉಪಯೋಗಿಸಿದ ಕಲ್ಲನ್ನು ಸ್ಥಳದಿಂದ ಚಾಸಾ.31 ರವರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸ್ಥಳದಲ್ಲಿ ಬಿದ್ದಿದ್ದ ಹಲ್ಲೆಗೆ ಉಪಯೋಗಿಸಿದ ಬೇರೆ ಕಲ್ಲುಗಳನ್ನು ಸಹ ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಮಹಜರ್ ಕಾಲದಲ್ಲಿ ನಾನು ಹಾಜರಿದ್ದು, ಮಹಜರ್ ಗೆ ಸಹಿ ಮಾಡಿರುತ್ತೇನೆ ಸಾಕ್ಷಿಯೂ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಸ್ಥಳ ಮಹಜರ್ ಆಗಿದ್ದು, ಅದನ್ನು ನಿಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸದರಿ ಕಲ್ಲುಗಳನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಬಿಳಿ ಬಟ್ಟೆಯಲ್ಲಿ ಸುತ್ತಿ ಸುಸ್ಥಿತಿಯಲ್ಲಿದ್ದ ವಸ್ತುಗಳನ್ನು, ನ್ಯಾಯಾಲಯದ ಅನುಮತಿ ಮೇರೆಗೆ ತೆಗೆದು ನೋಡಲಾಗಿ ಅದರಲ್ಲಿ ಒಂದು ಹಿಡಿ ಗಾತ್ರದ ಕಲ್ಲು ಇದ್ದು, ಅದನ್ನು ಎಂಒ–1 ಎಂದು, ಇನ್ನೊಂದು ಸೀಲಾದ ಬಟ್ಟೆಯಲ್ಲಿ 5 ಕಾಡು ಜಾತಿಯ ಕಲ್ಲುಗಳಿದ್ದು, ಅವುಗಳನ್ನು ಒಟ್ಟಾರೆಯಾಗಿ ಎಂಒ–2 ಎಂದು ಗುರುತಿಸಲಾಯಿತು.

11. ಆ ದಿನ ಗಲಾಟೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸಲು ಅಷ್ಟಾಗಿ ಆಗುವುದಿಲ್ಲ. ಕಾರಣ ಬಹಳ ದಿನಗಳಾಗಿರುತ್ತವೆ. ಆದರೆ ಇದೇ ಆಸಾಮಿಗಳು ಇರಬಹುದು. ನಾವು ಮುಂಜಾಗ್ರತೆಯಾಗಿ ಮೆರವಣಿಗೆಯ ವಿಡಿಯೋಗ್ರಾಫಿ ಮಾಡಿದ್ದು, ಅದರಲ್ಲಿ ಸದರಿ ಆಸಾಮಿಗಳು ಕಂಡು ಬಂದಿರುತ್ತಾರೆ ಎಂದು ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿತರನ್ನು ನೋಡಿ ನುಡಿಯುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

**(ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಾಯಾವಕಾಶ ಕೋರಿದ್ದು, ಸಮಯ ನೀಡಿ, ಪಾಟೀ ಸವಾಲನ್ನು ಮುಂದೂಡಲಾಯಿತು. )**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**